

ವಿಶ್ವದಾದ್ಯಂತ 1000ಕ್ಕೂ ಹೆಚ್ಚು ಐಸ್‌ಕ್ರೀಂ ಫ್ಲೇವರ್‌ಗಳಿವೆ.

ಐಸ್‌ಕ್ರೀಂ ಅತಿ ಹೆಚ್ಚು ಸೇವಿಸುವ ದೇಶಗಳಲ್ಲಿ ನ್ಯೂಜಿಲೆಂಡ್ ಮೊದಲ ಸ್ಥಾನದಲ್ಲಿದೆ. ಇಲ್ಲಿ ಪ್ರತಿವರ್ಷ ಸರಾಸರಿ ಪ್ರತಿ ವ್ಯಕ್ತಿ 7.5 ಗ್ಯಾಲನ್ ಐಸ್‌ಕ್ರೀಂ ತಿನ್ನುತ್ತಾನೆ. ನಂತರದ ಸ್ಥಾನ ಅಮೆರಿಕದ್ದು. ಆಸ್ಟ್ರೇಲಿಯಾ, ನಾರ್ವೆ ಸರದಿಯಲ್ಲಿವೆ.

ಐಸ್‌ಕ್ರೀಂನಲ್ಲೂ ಹಲವು ವಿಧಗಳಿವೆ. ಗೆಲಾಟೊ, ಕುಲ್ಫಿ, ಸಾರ್ಬೆ, ಐಸ್ ಪಾಪ್‌ಸಿಕಲ್, ಶರ್ಬೆಟ್, ಫ್ರೋಜನ್ ಯೋಗರ್ಟ್, ಫಿಲಡೆಲ್ಫಿಯಾ, ಸಾಫ್ಟ್ ಸರ್ವ್, ರೋಲ್ಡ್ ಐಸ್‌ಕ್ರೀಂ, ಸ್ನೋ ಕ್ರೀಂ, ಮೋಚಿ, ಇಟಾಲಿಯನ್ ಐಸ್, ಡಾಂಡರ್ಮ, ಗ್ರಾನಿಟಾ, ಸ್ಪೂಮ್, ಪಾರ್ಫೇಟ್ ಸೇರಿದಂತೆ ಪ್ರಾದೇಶಿಕತೆ ಹಾಗೂ ಅಭಿರುಚಿಗೆ ತಕ್ಕಂತೆ ವಿಶ್ವದಾದ್ಯಂತ ಹಲವು ವಿಧದ ಐಸ್‌ಕ್ರೀಂಗಳಿವೆ.

ಎರಡನೇ ಮಹಾಯುದ್ಧದಲ್ಲಿ ಸೈನಿಕರಲ್ಲಿ ಆತ್ಮಸ್ಥೈರ್ಯ ತುಂಬಲು ಅಮೆರಿಕ ತನ್ನ ಸೈನಿಕರಿಗೆ ಐಸ್‌ಕ್ರೀಂ ನೀಡುತ್ತಿತ್ತು.



ದಕ್ಷಿಣ ಅಮೆರಿಕದ ಕೊಲಂಬಿಯಾದ ಆಂಡಿಯನ್ ಕಣಿವೆಯಲ್ಲಿ ನಿಸರ್ಗವೇ ಐಸ್‌ಕ್ರೀಂನಂಥ ಹಣ್ಣನ್ನು ಕರುಣಿಸಿದೆ. ಅಲ್ಲಿ ಪ್ಯಾಕೇ ಎಂಬ ಮರವಿದ್ದು, ಇದರ ಹಣ್ಣುಗಳು ಥೇಟ್ ವೆನಿಲ್ಲಾ ಐಸ್‌ಕ್ರೀಂನಂತೆಯೇ ರುಚಿ ಹೊಂದಿರುತ್ತವೆ. ಪಾಡ್‌ನಂಥ ರಚನೆಯಲ್ಲಿ ಬೀನ್ಸ್ ರೀತಿಯ ಹಣ್ಣು ಇದ್ದು, ಅದರಲ್ಲಿನ ಬಿಳಿಯ ಪಲ್ಪ್ ಸಿಹಿಯಾಗಿದ್ದು, ಐಸ್‌ಕ್ರೀಂ ತಿಂದಂತೆಯೇ ಅನಿಸುತ್ತದೆ.

1665ರಲ್ಲಿ ಐಸ್‌ಕ್ರೀಂ ರೆಸಿಪಿ ಇದ್ದ ಮೊದಲ ಪುಸ್ತಕ ದೊರೆತಿದ್ದು, ಅದನ್ನು ಮೊದಲ ಐಸ್‌ಕ್ರೀಂ ರೆಸಿಪಿ ಎನ್ನಲಾಗಿದೆ.



ಆಕ್ಟೋಪಸ್, ಶ್ರಿಂಪ್, ಹಾರ್ಸ್‌ಫ್ಲೆಶ್, ಓಯಿಸ್ಟರ್, ಕರ್ರಿ ಫ್ಲೇವರ್ಡ್, ಚೀಸ್, ಪಿಜ್ಜಾ ಫ್ಲೇವರ್ಡ್, ಹನಿ ಪಿಕ್ಕಲ್, ಸ್ಕ್ವಿಡ್ ಇಂಕ್ ಹೀಗೆ ಸಾಕಷ್ಟು ಚಿತ್ರ ವಿಚಿತ್ರ ಫ್ಲೇವರ್‌ಗಳ ಐಸ್‌ಕ್ರೀಂಗಳು ಪ್ರಪಂಚದಾದ್ಯಂತ ಇವೆ. ದಿನೇ ದಿನೇ ಹೊಸ ಹೊಸ ಫ್ಲೇವರ್‌ಗಳು ಸೇರಿಕೊಳ್ಳುತ್ತಿವೆ ಕೂಡ.

ಐಸ್‌ಕ್ರೀಂ ಡೊಪಮಿನ್ ಹಾಗೂ ಸೆರೊಟೊನಿನ್ ಹಾರ್ಮೋನುಗಳ ಬಿಡುಗಡೆಗೆ ಪ್ರಚೋದನೆ ನೀಡುತ್ತದೆ. ಹೀಗಾಗಿ ಐಸ್‌ಕ್ರೀಂ ತಿನ್ನುವುದು ಕೆಲವರಿಗೆ ಬಹಳ ಖುಷಿ ನೀಡುವ ಸಂಗತಿ. ಮತ್ತೆ ಮತ್ತೆ ತಿನ್ನಬೇಕು ಎನಿಸುವುದೂ ಇದೇ ಕಾರಣಕ್ಕೆ.



2014ರಲ್ಲಿ ವಿಸ್ಕನ್‌ಸಿನ್‌ನಲ್ಲಿ ನಡೆಯುತ್ತಿದ್ದ ಸ್ಟ್ರಾಬೆರಿ ಫೆಸ್ಟಿವಲ್‌ನಲ್ಲಿ ಪ್ರದರ್ಶನಕ್ಕಿಟ್ಟಿದ್ದ ಐಸ್‌ಕ್ರೀಂ 'ವಿಶ್ವದ ಅತಿ ದೊಡ್ಡ ಐಸ್‌ಕ್ರೀಂ ಸ್ಕೂಪ್' ಎಂದು ದಾಖಲೆ ಬರೆಯಿತು. ಇದು 3010 ಪೌಂಡ್ ತೂಕವಿದ್ದು, 5 ಅಡಿ 6 ಇಂಚು ಉದ್ದ, 2 ಇಂಚು ಅಗಲ ಇತ್ತು.

ಅಮೆರಿಕದ ಡ್ರೇಯರ್ ಕಂಪನಿಯಲ್ಲಿ ಐಸ್‌ಕ್ರೀಂ ರುಚಿ ಪರೀಕ್ಷಿಸಲೆಂದೇ ಪ್ರತ್ಯೇಕ ನೌಕರಿ ಸೃಷ್ಟಿಸಿದ್ದು, ಜಾನ್ ಹ್ಯಾರಿಸನ್ ಎಂಬುವರು ಆ ಕೆಲಸಕ್ಕೆ ನೇಮಕವಾಗಿದ್ದರು. ಅವರು ತಮ್ಮ ನಾಲಿಗೆಗೆ ವಿಮೆ ಮಾಡಿಸಿದ್ದರು.

'ಆಧುನಿಕ ಐಸ್‌ಕ್ರೀಂ ಪಿತಾಮಹ' ಎಂದು ಆಗಸ್ಟಸ್ ಜಾಕ್ಸನ್ ಅವರನ್ನು ಕರೆಯಲಾಗುತ್ತದೆ. ಐಸ್‌ಕ್ರೀಂ ತಯಾರಿಕಾ ಪ್ರಕ್ರಿಯೆಯಲ್ಲಿ ಬದಲಾವಣೆ ತಂದವರು ಕೂಡ. ಫಿಲಡೆಲ್ಫಿಯಾದಲ್ಲಿ ಇವರು ಪರಿಚಯಿಸಿದ ಐಸ್‌ಕ್ರೀಂ ತಯಾರಿಕಾ ಪ್ರಕ್ರಿಯೆ ಹಾಗೂ ರೆಸಿಪಿಗಳು ಭಾರೀ ಜನಪ್ರಿಯತೆ ಗಳಿಸಿದವು.



2015ರಲ್ಲಿ ನಾರ್ವೆಯಲ್ಲಿ 10 ಅಡಿ ಉದ್ದದ ಐಸ್‌ಕ್ರೀಂ ವಿಶ್ವದಾಖಲೆ ಬರೆಯಿತು.

ಭಾರತದಲ್ಲಿ ಗುಜರಾತ್ ಅತಿ ಹೆಚ್ಚು ಐಸ್‌ಕ್ರೀಂ ಸೇವನೆಗೆ ಹೆಸರುವಾಸಿ.

ಮೂಲ: ಸ್ಪ್ರಾಸ್‌ಬರ್ಗ್


